(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)
**ಪಾಟೀ ಸವಾಲುಃ ಶ್ರೀ ಎಂ.ಎಂ. 1 ರಿಂದ 6 ನೇ ಆರೋಪಿತರ ಪರ ವಕೀಲರಿಂದ**

ಚಾಸಾ-1 ರವರು ನನ್ನ ಸ್ವಂತ ಅಕ್ಕ. ನಾನು ತೋಟಹಳ್ಳಿ ಗ್ರಾಮದ ವಾಸಿ ಎಂದರೆ ಸರಿ. ಪಟೇಲ್ ಕಾಳೀರೇಗೌಡನದೊಡ್ಡಿ ಗ್ರಾಮದಿಂದ ತೋಟಹಳ್ಳಿ ಗ್ರಾಮಕ್ಕೆ ಸುಮಾರು 2 ಕಿಲೋ ಮೀಟರ್ ದೂರವಾಗುತ್ತದೆ. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ಚಾಸಾ-1 ರವರ ಗಂಡ ನಾರಾಯಣಗೌಡ ತೀರಿಕೊಂಡು ಸುಮಾರು 5 ರಿಂದ 6 ವರ್ಷಗಳಾಗಿರುತ್ತವೆ. ಅವರು ಗ್ರಾನೈಟ್ ಕ್ವಾರೆ ಸಂಸ್ಥೆಯಲ್ಲಿ ಮೇಲ್ವಿಚಾರಕರು ಆಗಿದ್ದರು ಎಂದರೆ ಸರಿ. ನಾರಾಯಣಗೌಡರು ಮೊದಲಿಗೆ ಬಾಡಿಗೆ ಲಾರಿಗಳನ್ನು ಪಡೆದುಕೊಂಡು ಓಡಿಸುತ್ತಿದ್ದು, ನಂತರ ಅವರು ತೀರಿಕೊಳ್ಳುವ ಎರಡು ವರ್ಷಗಳ ಮುಂಚೆ ಎರಡು ಲಾರಿಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿ. ನಾನು ನನ್ನ ಮಾವ ನಾರಾಯಣಗೌಡರೊಂದಿಗೆ ಓಡಾಡಿಕೊಂಡು ಇದ್ದೆನು ಎಂದರೆ ಸರಿ. 5 ನೇ ಆರೋಪಿಯು ನಾರಾಯಣಗೌಡರೊಂದಿಗೆ ಕೆಲಸ ಮಾಡಿಕೊಂಡಿದ್ದನು ಎಂಬ ಪ್ರಶ್ನೆಗೆ ಸಾಕ್ಷಿಯು ಅವನು ಬಂದು ಹೋಗಿ ಮಾಡುತ್ತಿದ್ದನು ಎಂದು ಸಾಕ್ಷಿ ನುಡಿಯುತ್ತಾರೆ. 5 ನೇ ಆರೋಪಿಯ ಮದುವೆಯನ್ನು ಚಾಸಾ-1 ರವರು ಮತ್ತು ಅವರ ಗಂಡ ಮಾಡಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ವಾಸ ಮಾಡುವ ಮನೆಯ ಹತ್ತಿರದ ಅಲ್ಲಲ್ಲಿ ವಾಸದ ಮನೆಗಳು ಇರುತ್ತವೆ. ಚಾಸಾ-1 ರವರ ಮನೆಯಲ್ಲಿ ಗಲಾಟೆಯಾದ ಶಬ್ಧ ಪಕ್ಕದಲ್ಲಿ ವಾಸ ಮಾಡುತ್ತಿರುವ ಮನೆಯವರಿಗೆ ಕೇಳಿಸುತ್ತದೆ ಎಂದರೆ ಸರಿ.

ದಿಃ09.05.2020 ರಂದು ಆರೋಪಿತರು ಚಾಸಾ-1 ರವರ ಮನೆಗೆ ಬಂದ ಸಮಯದಲ್ಲಿ ನಾನು ಚಾಸಾ-1 ರವರ ಮನೆಯ ಒಳಗೆ ಇದ್ದೆನು. ಚಾಸಾ-1 ರವರು ಸ್ವಂತ ಕಾರನ್ನು ಹೊಂದಿರುತ್ತಾರೆ ಎಂದರೆ ಸರಿ. ಸದರಿ ಕಾರನ್ನು ಮನೆಯ ಮುಂಭಾಗದ ಮೇಲ್ಚಾವಣಿಯ ಕೆಳಗೆ ನಿಲ್ಲಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರ ಮನೆಯ ಗೇಟ್ ಬೀಗವನ್ನು ಯಾರು ಒಡೆದರು

ಎಂದು ನಾನು ನೋಡಿರುವುದಿಲ್ಲ. ಚಾಸಾ-1 ರವರ ಮನೆಗೆ 6 ಜನ ಆರೋಪಿತರು ಮಾತ್ರ ಬಂದಿರುತ್ತಾರೆ. ಆರೋಪಿತರು ಚಾಸಾ-1 ರವರ ಮನೆಯ ಒಳಗೆ ಬಂದು ಚಾಸಾ-4 ರವರು 3 ನೇ ಆರೋಪಿಯೊಂದಿಗೆ ವಿವಾಹವಾಗಿದ್ದು, ಚಾಸಾ-4 ರವರನ್ನು ಹೊರಗಡೆ ಕಳುಹಿಸಿಕೊಡಿ ಎಂದು ಕೇಳಿದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿತರು ಚಾಸಾ-1 ರವರ ಮನೆಯ ಬಳಿ ಬಂದು ಚಾಸಾ-4 ರವರನ್ನು ಮನೆಯಿಂದ ಹೊರಗೆ ಕಳುಹಿಸಿಕೊಡಿ, 3 ನೇ ಆರೋಪಿಯೊಂದಿಗೆ ಆತನ ವಿವಾಹ ಮಾಡಬೇಕು ಎಂದು ಆ ಸಮಯದಲ್ಲಿ ಕೇಳಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಆ ಸಮಯದಲ್ಲಿ ಚಾಸಾ-4 ರವರು ಮನೆಯ ಒಳಗೆ ಇದ್ದರು. ಚಾಸಾ-1 ರವರು ಚಾಸಾ-4 ರವರನ್ನು ಕಳುಹಿಸುವುದಿಲ್ಲವೆಂದು ಆರೋಪಿತರಿಗೆ ಉತ್ತರವರನ್ನು ನೀಡಿರತ್ತಾರೆಂದರೆ ಸರಿ. ಆ ಸಮಯದಲ್ಲಿ ನಾನು, ಚಾಸಾ-1, 2, 5 ರಿಂದ 7 ರವರು ಸೇರಿಕೊಂಡು ಆರೋಪಿತರೊಂದಿಗೆ ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-4 ರವರು ವ್ಯವಸಾಯ ಮಾಡಿಕೊಂಡಿರುತ್ತಾರೆ. ಚಾಸಾ-4 ರವರು ಸಾತನೂರಿನಲ್ಲಿ ಪಶು ಆಹಾರದ ಅಂಗಡಿಯನ್ನು ಇಟ್ಟುಕೊಂಡಿದ್ದ ಎಂದರೆ ಸರಿಯಲ್ಲ. ಚಾಸಾ-4 ರವರು 3 ನೇ ಆರೋಪಿಯೊಂದಿಗೆ ಪ್ರೀತಿ ವಿಶ್ವಾಸದಿಂದ ಇದ್ದು ಅವರೊಂದಿಗೆ ವಾಸಮಾಡಿಕೊಂಡಿದ್ದನು ಎಂದರೆ ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು, ಚಾಸಾ-1 ಹಾಗೂ ನಾರಾಯಣಗೌಡರವರು ಚಾಸಾ-4 ರವರಿಗೆ ಬುದ್ಧಿ ಮಾತನ್ನು ಹೇಳಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-1 ರವರು ಚಾಸಾ-4 ರವರಿಗೆ 3 ನೇ ಆರೋಪಿಗೆ ಫೋನ್ ಮಾಡಬಾರದೆಂದು ತಾಖೀತು ಮಾಡಿರುತ್ತೇವೆ ಎಂದರೆ ಸರಿಯಲ್ಲ.

4ನೇ ಆರೋಪಿಯು ನನ್ನ ತಲೆಯ ಹಿಂಭಾಗಕ್ಕೆ ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿರುತ್ತಾನೆ. 5ನೇ ಆರೋಪಿಯು ಚಾಸಾ-2ರವರಿಗೆ ಕಲ್ಲಿನಿಂದ ಹಲ್ಲೆ ಮಾಡಲು ಪ್ರಯತ್ನಪಟ್ಟಾಗ ನಾನು ಅಡ್ಡ ಹೋದ್ದರಿಂದ ನನ್ನ ಎಡಗೈ ಹೆಬ್ಬೆಟ್ಟಿಗೆ ಗಾಯವಾಗಿರುತ್ತದೆ. ಘಟನೆ ನಡೆಯಿತೆಂದು ಹೇಳಲಾದ ದಿನದಂದು ನಾನು ಬಿಳಿ ಬಣ್ಣದ ಸ್ಯಾಂಡೋ ಬನಿಯನ್‌ನ್ನು ಧರಿಸಿದ್ದನು. ಸದರಿ ಹಲ್ಲೆಯಿಂದ ನನ್ನ ಬನಿಯನ್‌ನ ಮುಂಭಾಗ ಮತ್ತು ಹಿಂಭಾಗ ರಕ್ತಕಲೆಯಾಗಿರುತ್ತದೆ ಮತ್ತು ಘಟನಾ ಸ್ಥಳದ ಅಲ್ಲಲ್ಲಿ ರಕ್ತದ ಗುರುತುಗಳು ಬಿದ್ದಿರುತ್ತವೆ. ನಾನು ಎಸ್‌ಎಸ್‌ಎಲ್‌ಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ.

ಸಾಮಾನ್ಯವಾಗಿ ಗಲಾಟೆಯಾದ ಸಂದರ್ಭದಲ್ಲಿ ಪೊಲೀಸರಿಗೆ ಮಾಹಿತಿ ನೀಡಬೇಕೆನ್ನುವ ವಿಚಾರ ತಿಳಿದಿರುತ್ತದೆ ಎಂದರೆ ಸರಿ. ಗಲಾಟೆಯಾದ ಬಗ್ಗೆ ಸಾತನೂರು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ರಕ್ತಗಾಯವಾಗಿದ್ದರಿಂದ ಸಾತನೂರು ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ. ಚಾಸಾ-1ರವರ ಮನೆಯಿಂದ ಸಾತನೂರು ಪೊಲೀಸ್ ಠಾಣೆಗೆ 03 ಕಿಲೋ ಮೀಟರ್ ದೂರವಾಗುತ್ತದೆ. ಚಾಸಾ-1ರವರ ಮನೆಯಿಂದ ಸಾತನೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸುಮಾರು 04 ಕಿಲೋ ಮೀಟರ್ ದೂರವಾಗುತ್ತದೆ. ಹಲ್ಲೆಯಾದ ಸಮಯದಲ್ಲಿ ನನ್ನ ತಲೆಯ ಕೂದಲು ರಕ್ತವಾಗಿರುತ್ತದೆ. ಹಲ್ಲೆಯಾದ ಸಮಯದಲ್ಲಿ ನನ್ನನ್ನು ನನ್ನ ತಂದೆ ಸೀತರಾಮೇಗೌಡ, ಚಾಸಾ-1, 2, 6 ಮತ್ತು 7 ರವರು ಕನಕಪುರ ಸರ್ಕಾರಿ ಆಸ್ಪತ್ರೆಗೆ ಇನ್ನೋವ ಕಾರಿನಲ್ಲಿ ಕರೆದುಕೊಂಡು ಬಂದಿರುತ್ತಾರೆ. ಕಾರಿನ ಸೀಟ್ ಕವರ್ ರಕ್ತದಕಲೆಯಾಗಿರುವುದಿಲ್ಲ ಎಂದರೆ ಸರಿ. ಘಟನೆ ನಡೆಯಿತೆಂದು ಹೇಳಲಾದ ಸಮಯದಲ್ಲಿ ನನ್ನ ತಂದೆ ಸೀತರಾಮೇಗೌಡ ತೋಟಹಳ್ಳಿ ಗ್ರಾಮದಲ್ಲಿದ್ದರು. ಗಲಾಟೆ ನಡೆದ 20 ನಿಮಿಷಗಳ ನಂತರ ನನ್ನ ತಂದೆ ಚಾಸಾ-1ರವರ ಮನೆಗೆ ಬಂದಿರುತ್ತಾರೆ.

ನಾನು ಕನಕಪುರದ ಮೆಳೆಕೋಟೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ವೈದ್ಯರು ನನ್ನ ತಲೆಯ ಹಿಂಭಾಗದಲ್ಲಿ ಆದ ರಕ್ತಗಾಯವನ್ನು ನೋಡಿ ಕೂದಲುಗಳನ್ನು ತೆಗೆದು ಮೂರು ಹೊಲಿಗೆಯನ್ನು ಹಾಕಿ ಶೂಶ್ರುಷೆ ಮಾಡಿರುತ್ತಾರೆ ಆದರೆ ನನ್ನ ಕೂದಲನ್ನು ಸಂಗ್ರಹಿಸಿದ ಬಗ್ಗೆ ಮಾಹಿತಿ ಇರುವುದಿಲ್ಲ. ಚಾಸಾ-2 ರವರಿಗೆ ತಲೆಯ ಮೇಲೆ ಹಲ್ಲೆಯಾದ್ದರಿಂದ ಆತನು ಧರಿಸಿದ್ದ ಬಟ್ಟೆಯ ಮುಂಭಾಗದಲ್ಲಿ ರಕ್ತಕಲೆಯಾಗಿರುತ್ತದೆ. ಎರಡು ಗಂಟೆಗಳ ಕಾಲ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಹಾಗೂ ಚಾಸಾ-2 ರವರು ಆಸ್ಪತ್ರೆಯಿಂದ ಚಿಕಿತ್ಸೆ ಪಡೆದುಕೊಂಡು ಮೊದಲಿಗೆ ಚಾಸಾ-1 ರವರ ಮನೆಯ ಬಳಿ ಹೋಗಿದ್ದು, ಚಾಸಾ-2 ರವರು ಅಲ್ಲಿಯೇ ಉಳಿದುಕೊಂಡಿದ್ದು, ನಂತರ ನಾನು ನನ್ನ ಮನೆಗೆ ಹೋಗಿರುತ್ತೇನೆ. ನಾನು ಕನಕಪುರ ಪುರ ಪೊಲೀಸ್ ಠಾಣೆಗೆ ದೂರನ್ನು ನೀಡಿರುವುದಿಲ್ಲ. ನಾನು ಸಾತನೂರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಚಾಸಾ-1 ರವರು ಸಾತನೂರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ. ಚಾಸಾ-1 ರವರು ಯಾರೊಂದಿಗೆ ಸಾತನೂರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿ-3 ರವರು ಚಾಸಾ-1 ಹಾಗೂ 4 ರವರ ವಿರುದ್ಧ ಸಾತನೂರು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಆರೋಪಿ-3 ರವರು ದೂರು ನೀಡಿದ ನಂತರ ಚಾಸಾ-1 ಮತ್ತು 4 ರವರು ಸಾತನೂರು ಪೊಲೀಸ್ ಠಾಣೆಗೆ ವಿಚಾರಣೆಗೆ ಹಾಜರಾಗಿದ್ದು, ಅಲ್ಲಿ ಪೊಲೀಸರು ಚಾಸಾ-1, 4 ಹಾಗೂ ಆರೋಪಿ-3 ರವರಿಗೆ ಕೌಟುಂಬಿಕ ಸಂಗತಿಯಾದ್ದರಿಂದ ನೀವೇ ಕುಳಿತುಕೊಂಡು ಬಗೆಹರಿಸಿಕೊಳ್ಳಿ ಎಂದು ಸಲಹೆಯನ್ನು ನೀಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಇದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ದಿ:09.05.2020 ರಂದು ಆರೋಪಿ-1 ರಿಂದ 4 ರವರು ಬೆಂಗಳೂರಿನ ಶಿವಶಕ್ತಿ ಮಹಿಳಾ ಸಂಘಕ್ಕೆ ಹೋಗಿ ನ್ಯಾಯಕೊಡಿಸುವಂತೆ ಕೇಳಿಕೊಂಡಿದ್ದರಿಂದ, ಆ ದಿನ ಆರೋಪಿ-1 ರಿಂದ 6 ರವರ ಜೊತೆ ಬೆಂಗಳೂರಿನ ಶಿವಶಕ್ತಿ ಮಹಿಳಾ ಸಂಘದವರು ಚಾಸಾ-1 ರವರ ಮನೆಗೆ ನ್ಯಾಯ ಕೇಳಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು, ಚಾಸಾ-1, 2 ಮತ್ತು 6 ರವರು ಸೇರಿಕೊಂಡು ಆರೋಪಿತರಿಗೆ ಹಾಗೂ ಬೆಂಗಳೂರಿನ ಶಿವಶಕ್ತಿ ಮಹಿಳಾ ಸಂಘದ ಸದಸ್ಯರಿಗೆ ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಕನಕಪುರ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-1 ರವರ ಮನೆಗೆ ಹೋಗಿದ್ದು, ಅಲ್ಲಿ ನನ್ನ ಬನಿಯನ್‌ನ್ನು ತೆಗೆದಿಟ್ಟು ನಂತರ ಬದಲಿ ಬಟ್ಟೆಯನ್ನು ಹಾಕಿಕೊಂಡು ತೋಟಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ.

ದಿ:10.05.2020 ರಂದು ಚಾಸಾ-4 ರವರ ಮದುವೆಯು ಮದ್ದೂರಿನ ಬಸವೇಶ್ವರ ದೇವಸ್ಥಾನದಲ್ಲಿ ನಡೆದಿರುತ್ತದೆ. ಸದರಿ ಮದುವೆಗೆ ನಾನು, ನನ್ನ ತಂದೆ, ಚಾಸಾ-1, 2, 4 ರಿಂದ 7 ರವರು ಹಾಗೂ ನಮ್ಮ ಕುಟುಂಬದ ಬಂದುಬಳಗದವರು ಹೋಗಿರುತ್ತೇವೆ. ಆ ಸಮಯದಲ್ಲಿ ಕೋವಿಡ್ ಸಾಂಕ್ರಮಿಕ ರೋಗ ಇದ್ದ ಕಾರಣ ಬೆಳಗ್ಗೆ 6-30 ರಿಂದ 7-00 ಗಂಟೆ ಸಮಯದಲ್ಲಿ ಚಾಸಾ-4 ರವರ ವಿವಾಹವಾಗಿರುತ್ತದೆ. ನಂತರ ಬೆಳಗ್ಗೆ 9-00 ಗಂಟೆಗೆ ವಾಪಸ್ ಮನೆಗೆ ಬಂದಿರುತ್ತೇವೆ. ಚಾಸಾ-1 ರವರು ನನ್ನ ಬನಿಯನ್‌ನ್ನು ಪೊಲೀಸರಿಗೆ ನೀಡಿರುತ್ತೇನೆಂದು ಮಾಹಿತಿಯನ್ನು ನೀಡಿರುತ್ತಾರೆ. ಆರೋಪಿತರು ನಮಗೆ ಹಲ್ಲೆ ಮಾಡಿದ ನಂತರ ಕಬ್ಬಿಣದ ರಾಡು, ಚಾಕು ಹಾಗೂ ಕಲ್ಲನ್ನು ಅಲ್ಲಿಯೇ ಬಿಸಾಡಿ ಹೋಗಿರುತ್ತಾರೆ. ನಾನು ಚಿಕಿತ್ಸೆ ಪಡೆದ ನಂತರ ಪೊಲೀಸರು ಚಾಸಾ-1 ರವರ ಮನೆಗೆ ಭೇಟಿ ನೀಡಿದ ಮಾಹಿತಿಯನ್ನು ನಾನು ತಿಳಿದುಕೊಂಡಿರುವುದಿಲ್ಲ.

ದಿ:10.05.2020 ರಂದು ನಾನು ಹಾಗೂ ಚಾಸಾ-2 ರವರು ಪೊಲೀಸ್ ಠಾಣೆಗೆ ಖುದ್ದಾಗಿ ಹೋಗಿ ಹೇಳಿಕೆಯನ್ನು ನೀಡಿರುತ್ತೇವೆ. ಆ ಸಮಯದಲ್ಲಿ ನಮ್ಮೊಂದಿಗೆ ಬೇರೆ ಯಾರು ಬಂದಿರುವುದಿಲ್ಲ. ಚಾಸಾ-1 ರವರಿಗೆ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲು ಹೋಗಿರುತ್ತೇನೆ. ಅಲ್ಲಿ ಚಾಸಾ-2 ರವರು ಹೊರ ರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ಸಾಮಾನ್ಯವಾಗಿ ಎಂಒ-5 ಎಲ್ಲರ ಮನೆಯಲ್ಲಿ ಸಿಗುತ್ತದೆ ಎಂದರೆ ಸರಿ. ಚಾಸಾ-2 ರವರಿಗೆ ಹಲ್ಲೆ ಮಾಡಿದ ಎಂಒ-5 ರಕ್ತದ ಕಲೆಯಾಗಿತ್ತು. ಈ ಹಂತದಲ್ಲಿ ಸಾಕ್ಷಿಗೆ ಎಂಒ-5 ನ್ನು ತೋರಿಸಿ ಅದರ ಮೇಲೆ ರಕ್ತದ ಕಲೆ ಇದೆಯೆಂಬ ಪ್ರಶ್ನೆಗೆ ಸಾಕ್ಷಿಯು ಘಟನಾ ಸಮಯದಲ್ಲಿ ಎಂಒ-5 ರಕ್ತದಕಲೆಯಾಗಿತ್ತು, ಈಗ ಎಂಒ-5 ರ ಮೇಲೆ ರಕ್ತದಕಲೆಗಳಂತೆ ಕಂಡುಬರುವ ಗುರುತುಗಳು ಕಾಣುತ್ತಿವೆ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಹಲ್ಲೆ ಮಾಡಿದ ಕಬ್ಬಿಣದ ರಾಡು ರಕ್ತಕಲೆಯಾಗಿತ್ತು. ಈ ಹಂತದಲ್ಲಿ ಸಾಕ್ಷಿಗೆ ಎಂಒ-6 ನ್ನು ತೋರಿಸಿ ಅದರ ಮೇಲೆ ರಕ್ತದ ಕಲೆ ಇದೆಯೆಂಬ ಪ್ರಶ್ನೆಗೆ ಸಾಕ್ಷಿಯು ಘಟನಾ ಸಮಯದಲ್ಲಿ ಎಂಒ-5 ರಕ್ತದಕಲೆಯಾಗಿತ್ತು, ಈಗ ಎಂಒ-6 ರ ಮೇಲೆ ರಕ್ತದಕಲೆಗಳಂತೆ ಕಂಡುಬರುವ ಗುರುತುಗಳು ಕಾಣುತ್ತಿವೆ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಯು ಎಂಒ-2 ನ್ನು ತೋರಿಸಿ ಅದರ ಮುಂಭಾಗ ಮತ್ತು ಹಿಂಭಾಗ ರಕ್ತದ ಕಲೆಯಾಗಿರುವುದನ್ನು ತೋರಿಸಿದ್ದು, ಈ ಹಂತದಲ್ಲಿ ಆರೋಪಿತರ ಪರ ವಕೀಲರು ಎಂಒ-2 ರ ಮುಂಭಾಗ ಮತ್ತು ಹಿಂಭಾಗದಲ್ಲಿ ಕಂಡುಬರುವ ಗುರುತುಗಳು ರಕ್ತದ ಕಲೆಯಲ್ಲ ಎಂದು ಸೂಚಿಸಿದಾಗ ಸಾಕ್ಷಿ ಅದನ್ನು ಅಲ್ಲಗೆಳೆಯುತ್ತಾರೆ.

ದಿ:09.05.2020 ರಂದು ಆರೋಪಿತರು ಹಾಗೂ ಬೆಂಗಳೂರಿನ ಶಿವಶಕ್ತಿ ಮಹಿಳಾ ಸಂಘದ ಸದಸ್ಯರು ಚಾಸಾ-1 ರವರ ಮನೆಗೆ ನ್ಯಾಯ ಕೇಳಲು ಬಂದಾಗ ನಾವು ಅವರೊಂದಿಗೆ ಜಗಳ ತೆಗೆದು ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-2 ರವರು

ಸ್ವತಃ ಗಾಯಮಾಡಿಕೊಂಡು ಆರೋಪಿತರ ವಿರುದ್ದ ಸುಳ್ಳು ಕೇಸು ದಾಖಲಿಸಲು ಸುಳ್ಳು ಸಾಕ್ಷಿಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ದೂರನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂಒ-3 ರಿಂದ 7 ನ್ನು ಚಾಸಾ-1 ರವರ ಮನೆಯಿಂದ ತಂದು ಈ ಕೇಸಿಗೋಸ್ಕರ ಬನಾವಟ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ರಕ್ತದ ಗುಂಪನ್ನು ಪರೀಕ್ಷೆ ಮಾಡಿಸಿರುವುದಿಲ್ಲ. ನನಗೆ ಚಾಸಾ-2 ರವರ ರಕ್ತದ ಗುಂಪು ತಿಳಿದಿರುವುದಿಲ್ಲ. ಚಾಸಾ-1 ಮತ್ತು 4 ರವರ ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಸಮಕ್ಷಮ ಗಲಾಟೆಯಾದ ಬಗ್ಗೆ ಮಾತ್ರ ಹೇಳಿಕೆ ನೀಡಿರುತ್ತೇನೆ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.